ಓ.ಎಸ್.76/2016 ಪಿ.ಡಬ್ಲ್ಯೂ-3
ದೊಡ್ಡಪ್ಪ ತಂದೆ ಬಾಲಪ್ಪ

ದಿ.19-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ ಎ.ಎನ್ ವಕೀಲರಿಂದ:-**

ಸರ್ವೆ ನಂ.165/1ಬಿ ವಿಸ್ತೀರ್ಣ 9 ಎಕರೆ 7 ಗುಂಟೆ ದೇವಣ್ಣರಿಗೆ ಬಂದಿತ್ತು ಎಂದರೆ ಸರಿಯಲ್ಲ. ಸರ್ವೆ ನಂ.63 ಮತ್ತು 64 ರಲ್ಲಿ ಕಬ್ಜಾ ವಹಿವಾಟು ಪ್ರಕಾರ ಹಿಸ್ಸಾ ಸರ್ವೆ ಮಾಡಿದ್ದರು ಎಂದರೆ ಸರಿಯಲ್ಲ. 2014 ರಲ್ಲಿ ಭೂದಾಖಲೆಗಳ ಉಪನಿರ್ದೇಶಕರು ರಾಯಚೂರು ಇವರು ಹಿಂದಿನ ಹಿಸ್ಸಾಗಳನ್ನು ರದ್ದು ಮಾಡಿ ಹೊಸ ಹಿಸ್ಸಾಗಳನ್ನು ಮಾಡಿ 3 ಪಟ್ಟಿ ಮಾಡಿದ್ದರು ಎಂದರೆ ಸರಿಯಲ್ಲ. ಅದರಲ್ಲಿ 9 ಎಕರೆ 7 ಗುಂಟೆ ದೇವಣ್ಣನಿಗೆ, ಸಂಗಮ್ಮಳಿಗೆ 9 ಎಕರೆ 6 ಗುಂಟೆ, ಅದೇ ರೀತಿ ಗದ್ದೆಪ್ಪ ಮತ್ತು ಉಜ್ಜಪ್ಪರಿಗೆ 11 ಎಕರೆ 5 ಗುಂಟೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು 21 ಎಕರೆ 18 ಗುಂಟೆ ಸಂಗಮ್ಮರವರು ಕಬ್ಜಾ ಇರುವ ವಿಷಯ ಮಾತ್ರ ಗೊತ್ತಿದೆ ಎನ್ನುತ್ತಾರೆ. ದೇವಣ್ಣ ಮತ್ತು ಸಂಗಮ್ಮಳ ನಡುವೆ ಕೇವಲ 18 ಎಕರೆ 13 ಗುಂಟೆ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಗಮ್ಮ ಮತ್ತು ದೇವಣ್ಣ ರವರು ಗದ್ದೆಪ್ಪನ ಹೊಲಗಳ ನಡುವೆ ಕಲ್ಲುಗಳನ್ನು ಇವರೆ ಹಾಕಿ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗದ್ದೆಪ್ಪ ಅಂಗವಿಕಲ ಇದ್ದಾನೆ ಎಂದರೆ ಸರಿ. ಆತ ಅಂಗವಿಕಲ ಇರುವುದರಿಂದ 2015 ರಲ್ಲಿ ಸರ್ಕಾರಕ್ಕೆ ಮನವಿ ಸಲ್ಲಿಸಿ ವಾದಿಯರು ನನ್ನ ಭೂಮಿ ಎತ್ತಿ ಹಾಕುವ ಸಲುವಾಗಿ ಒತ್ತುವರಿ ಎಂದು ನನ್ನ ಕಡೆಯಿಂದ ಬರೆಸಿಕೊಂಡಿರುತ್ತಾರೆ ಎಂದು ಸರ್ಕಾರಕ್ಕೆ ಮನವಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. 2015 ರಲ್ಲಿ ಆ ಪ್ರಕಾರ ಸರ್ವೆ ಅಧಿಕಾರಿಗಳು ಬಂದು ಹದ್ದುಬಸ್ತಿ ಮಾಡಿ ಒತ್ತುವರಿ ಮಾಡಿದ 2 ಎಕರೆ 30 ಗುಂಟೆ ಜಮೀನನ್ನು ಗದ್ದೆಪ್ಪನಿಗೆ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ. ಸಂಗಮ್ಮಳ ಹೊಲದ ದಕ್ಷಿಣ ದಿಕ್ಕಿಗೆ ಗದ್ದೆಪ್ಪನ ಪಟ್ಟಿ ಇರುತ್ತದೆ. ಸಾಕ್ಷಿ ಮುಂದುವರೆದು ಗದ್ದೆಪ್ಪ, ರಾಮಲಿಂಗಪ್ಪ ಮತ್ತು ಉಜ್ಜಪ್ಪ ರವರ 3 ಪಟ್ಟಿಗಳ ಇರುತ್ತವೆ ಎನ್ನುತ್ತಾರೆ. ದಕ್ಷಿಣಕ್ಕೆ ಕೇವಲ ಗದ್ದೆಪ್ಪನ ಪಟ್ಟಿ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಗಮ್ಮಳ ಪಟ್ಟಿ ಉತ್ತರಕ್ಕೆ ದೇವಣ್ಣನ ಪಟ್ಟಿ ಇದೆ ಎಂದರೆ ಸರಿ.

2. ಈ ದಾವೆಯನ್ನು ಗದ್ದೆಪ್ಪ ಸಂಗಮ್ಮಳ ಮೇಲೆ ಹಾಕಿರುತ್ತಾರೆ. ಅತಿಕ್ರಮಣವನ್ನು ಸಂಗಮ್ಮ ಮಾಡಿರುತ್ತಾಳೆ ಎಂದು ಹಾಕಿರುತ್ತಾರೆ. ಆದರೆ ಸಂಗಮ್ಮ ಒತ್ತುವರಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.165 ರ ದಕ್ಷಿಣಕ್ಕೆ ಸರ್ವೆ ನಂ.164 ಇದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂ.164 ರ ದಕ್ಷಿಣಕ್ಕೆ ಈಚನಾಳ-ತೋರಲಬೆಂಚಿ ರಸ್ತೆ ಇದೆ

ಎಂದರೆ ಸರಿ. ಸರ್ವೆ ನಂ.164 ಮತ್ತು 165 ರ ಪೂರ್ವಕ್ಕೆ ಸರ್ವೆ ನಂ.167/1 ಇದೆ ಎಂದರೆ ಸರಿ. ಸರ್ವೆ ನಂ.165/1 ಮತ್ತು 2 ಗಳ ಪೂರ್ವಕ್ಕೆ ಸರ್ವೆ ನಂ.167/1 ಮತ್ತು 166 ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸ್ವಂತ ಒಕ್ಕಲುತನ ಮಾಡುವುದಿಲ್ಲ ಆಯುರ್ವೇದಿಕ್ ಔಷಧಿ ಕೊಡುತ್ತೇನೆ ಎಂದರೆ ಸರಿಯಲ್ಲ. ಈಚನಾಳ ಗ್ರಾಮದಿಂದ ನಮ್ಮ ಹೊಲಕ್ಕೆ ಹೋಗಲು ದೊಡ್ಡ ರಸ್ತೆ ಇದೆ ಎಂದರೆ ಸರಿ.

೩. ನನ್ನ ಸೊಸೆ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ನಿಂತಿದ್ದರು ಎಂದರೆ ಸರಿ. ಸದರಿ ಚುನಾವಣೆಯಲ್ಲಿ ಗದ್ದೆಪ್ಪನು ಪಿಡ್ಡೆಗೌಡರ ಹೆಣ್ಣುಮಕ್ಕಳ ಪರವಾಗಿ ಮಾಡಿದ್ದರಿಂದ ಅವರ ಮೇಲೆ ದ್ವೇಷದಿಂದ ನಾನು ದೇವಣ್ಣನ ಪರವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.